(THE HON'BLE SRI T. MARIAPPA.)

The names of works that have been already commenced.—

		Rs.
1	Extending Alahalli right bank channel	3,600
2	Improvements to Maralawadi tank and channels	10,000
3	Extending the sluice channel of Cabbal Hosakere	2,500
4	Restoration of Halsur Thavarekere	5,000
5	Construction of a pick-up across halla near Keralalasandra	4,000
6	Do do Chickanahalli Jalada Bhavihalla ...	3,960

Other minor irrigational works are under progress.—

1	Repairs to Hosadurga Bokkasandanakere		...	...	1,900
2	Repairs to Hukunda Shettikere	...	...	...	1,500
3	Repairs to Srinivasanahalli tank	...	...	..	450
4	Repairs to Chikkalahalli tank	...	...	..	468
5	Repairs to the branch channel of Maralawadi tank	...	...	...	2,000

ಶ್ರೀ ಎಸ್. ಕರಿಯಪ್ಪನವರು.—ಇಲ್ಲಿ ಕೊಟ್ಟಿರತಕ್ಕ ಕೆಲಸಗಳನ್ನೆಲ್ಲಾ ನೀವು ಎಷ್ಟು ವರ್ಷಗಳಲ್ಲಿ ಮಾಡಬೇಕೆ ದು ಮಾಡಿಕೊಂಡಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ಆರ್ಥಿಕ ಆಹಾರೋತ್ಪತ್ತಿ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಕೆಲಸಗಳನ್ನೂ 1952ನೆಯ ಇಸವಿ ಜೂನ್ 30 ರೊಳಗಾಗಿ ಮುಗಿಸಬೇಕೆಂದಿದೆ.

ಶ್ರೀ ಎಸ್. ಕರಿಯಪ್ಪನವರು.—ಚಾಲ್ತಿ ಸಾಲಿನಲ್ಲಿ ಯಾವ ಯಾವ ಕೆಲಸಗಳನ್ನು ಮಾಡಬೇಕೆಂದಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಚಾಲ್ತಿ ಸಾಲಿನಲ್ಲೆ ಅದಷ್ಟೂ ಮಾಡಬೇಕೆಂದಿದೆ. ಒಂದು ವೇಳೆ ಅಷ್ಟೂ ಮಾಡುವುದಕ್ಕೆ ಸಾಧ್ಯವಾಗದೆ ಉಳಿದರೂ ಈ ಹಣವನ್ನು ಮುಂದಕ್ಕೂ carry over ಮಾಡಬಹುದು. ಏಕೆಂದರೆ ಈ ವರ್ಷದಲ್ಲಿ ಕೇವಲ 6 ತಿಂಗಳು ಮಾತ್ರ work period ಆದ್ದರಿಂದ ಮಿಕ್ಕ ಹಣ ಲ್ಯಾಪ್ಸ್ ಆಗುವುದಿಲ್ಲ. ಅಂತೂ ಒಟ್ಟಿನಲ್ಲಿ 1952ನೆಯ ಜೂನ್ ಹೊತ್ತಿಗೆ ಮುಗಿಯಬೇಕು.

ಶ್ರೀ ಎಸ್. ಕರಿಯಪ್ಪನವರು.—ಇಲ್ಲಿ ಕೊಟ್ಟಿರತಕ್ಕ ಕೆಲಸಗಳಲ್ಲಿ ಯಾವ್ಯಾವುಗಳನ್ನು ಈ ಸಾರಿ ಮುಗಿಸಬೇಕೆಂದಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ನೋಟೀಸ್.

ಶ್ರೀ ಎಸ್. ಕರಿಯಪ್ಪನವರು.—ಕಾನಕಾನಹಳ್ಳಿ ತಾಲ್ಲೂಕಿನಲ್ಲಿ lift irrigation ಯೋಜನೆ ಯಾವುದೂ ಇಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮುಂದಿನ ಪ್ರಶ್ನೆಯಲ್ಲಿ ಅದನ್ನು ಕೊಟ್ಟಿದೆ.

ಶ್ರೀ ಎಸ್. ಕರಿಯಪ್ಪನವರು.—ಅಧಿಕ ಆಹಾರೋತ್ಪತ್ತಿಯ ಸಂಬಂಧದಲ್ಲಿ ಅದೂ ಬರುವುದಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮುಂದಿನ ಪ್ರಶ್ನೆಯೂ ತಮ್ಮದೇ ಪ್ರಶ್ನೆ. ಅದರ ಸಂಬಂಧದಲ್ಲಿ ಈ ವಿಷಯವನ್ನು ತಿಳಿಸಿದ್ದೇನೆ.

ಶ್ರೀ ಎಸ್. ಕರಿಯಪ್ಪನವರು.—ಇಲ್ಲಿ ಕೊಟ್ಟಿರುವ ಕೆಲಸಗಳ ಬಗ್ಗೆ ಇನ್ನು ಕೆಲವಕ್ಕೆ ಅಂದಾಜುಗಳೇ ತಯಾರಾಗಿಲ್ಲ, ಇನ್ನು ಕೆಲವಕ್ಕೆ ಅಂದಾಜುಗಳು ತಯಾರಿಸಿದ್ದರೂ ಮಂಜೂರಾಗಿಲ್ಲ. ಹೀಗಿದ್ದಾಗ ಈ ಕೆಲಸಗಳನ್ನೆಲ್ಲಾ ಈ ಸಾರಿಯೇ ಮಾಡುವುದಕ್ಕೆ ಏನು ಏರ್ಪಾಡು ಮಾಡುತ್ತೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕಾಗಿಯೇ ಈಗ ಕೆಲಸಗಳನ್ನು ಅಲ್ಲಲ್ಲಿಯೇ ಸರ್ವೆ ಮಾಡಿ, ಅಂದಾಜು ತಯಾರಿಸಿ ಕೂಡಲೇ ಸ್ಯಾಂಕ್ಷನ್ ಕೂಡ ಮಾಡಬಹುದೆಂದು ಹೇಳಿ ತಮ್ಮ ತಾಲ್ಲೂಕಿಗೇ ಒಂದು ಸ್ಪೆಷಲ್ ಸರ್ ಡಿವಿಜ್ ಸಹ ಕೊಟ್ಟಿದ್ದೇವೆ.

ಶ್ರೀ ಎಸ್. ಕರಿಯಪ್ಪನವರು.—ಅಲ್ಲಿ ಕೊಟ್ಟಿರತಕ್ಕ ಕೆಲಸಗಳನ್ನೆಲ್ಲಾ ನೋಡಿದರೆ ಸಾಧಾರಣವಾಗಿ 50,000 ರೂಪಾಯಿಗಳ ಕೆಲಸವಾಗುತ್ತದೆ. ಇಷ್ಟು ಮಾಡಿಬಿಟ್ಟರೆ ಸಾಕೇ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಲದು, ಇನ್ನೂ ಹೆಚ್ಚಿಗೆ ಮಾಡಬೇಕೆಂದಿದೆ.

ಶ್ರೀ ಎಸ್. ಕರಿಯಪ್ಪನವರು.—ಹಾಗೆ ಹೆಚ್ಚಿಗೆ ಕೆಲಸ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಗ್ಸಿಕ್ಯೂಟಿವ್ ಎಂಜಿನಿಯರ್‌ಗೆ ಹೆಚ್ಚಿಗೆ ಅಧಿಕಾರ ಕೊಡಬೇಕೆಂದು ಆಲೋಚನೆ ಮಾಡಿದೆ. ಇರಿಗೇಷನ್ ಆಕ್ಟ್ ಪ್ರಕಾರ ಮಾಡಬೇಕಾಗಿರತಕ್ಕ ವಿಚಾರಣೆಯನ್ನು ತಪ್ಪಿಸಿಬಿಟ್ಟರೆ ಒಳ್ಳೆಯದಾಗುತ್ತದೆಂದು ಕಾಣುತ್ತದೆ. ಆದ್ದರಿಂದ ತುರ್ತಿನ ಕೆಲಸಗಳ ವಿಷಯದಲ್ಲಿ ಮುಂಚೆ ಕಾರ್ಯಕ್ರಮ ತೆಗೆದುಕೊಂಡು ಅಮೇಲೆ ಈ ಅಂದಾಜು ಮುಂತಾದುವುಗಳನ್ನು ಮಾಡಬಹುದೆಂದು ತಿಳಿಸಿದ್ದೇವೆ.

Grants from Central Government for Grow More Food Scheme last year.

*Q.—15. SRI S. KARIAPPA (Bangalore District—General).—

Will the Government be pleased to state:—

(*a*) the grant the Central Government were pleased to sanction to the Mysore State for the "Grow More Food" Scheme last year;

(*b*) the amount that was utilised out of it:

(*c*) the grant the Central Government have been pleased to sanction for the current year;

(*d*) the works that have been taken up under the "Grow More Food" Scheme (Names, places and estimated cost of the schemes may please be given)?

A.—The Hon'ble Sri T. MARIAPPA (Home Minister).—

(*a*) Rs. 42,63,223.

(*b*) Rs. 42,63,223.

(*c*) Rs. 33,55,238.

(*d*) A copy of statement is appended below.

Works that have been taken up under the Grow More Food Scheme during the year 1949–50.

Names of Schemes	Names of Divisions																
	Hassan	Shimoga	Chikmagalur	Chitaldrug	Sagar	Davangere	Tunga Anicut	Tumkur	Kolar	Bangalore	Mysore	Mandya	Nanjangud	Upper Cauvery	Malvally	Nugu Reservoir	Tunnel Division	Total
1. Major Irrigation works.	1	3	...	2	...	4	2	3	...	2	...	...	...	...	...	1	...	18
2. Land Improvement Schemes	1	...	...	8	...	...	...	...	1	1	2	69	6	7	84	...	1	175
3. Repairs and Improvements to River Channels.	8	14	2	26	...	...	1	30	14	19	1	73	191	94	92	5	1	571
4. Restoration of Minor tanks.	59	70	52	20	105	...	17	35	105	72	100	23	6	22	4	...	...	690
5. Lift Irrigation in River Valleys.	...	...	...	1	...	...	...	...	...	...	...	...	...	...	1	...	...	2
6. Desilting of tanks.	...	...	...	...	...	...	...	...	...	2	...	...	...	...	...	...	...	2
7. I. C. F. Works (Minor repairs to sluices, waste-weirs, etc.)	...	...	...	...	...	...	...	...	...	...	...	...	...	...	...	...	...	3,000

ಶ್ರೀ ಎಸ್. ಕರಿಯಪ್ಪನವರು.—ಇಲ್ಲಿ ಕೊಟ್ಟಿರುವುದರಲ್ಲಿ ಇಂಡಿಯಾ ಸರ್ಕಾರದವರು 42,63,223 ರೂಪಾಯಿಗಳನ್ನು ಕಳೆದ ಸಾಲಿನಲ್ಲಿ ಒದಗಿಸಿದರೆಂದು ಹೇಳಿದ್ದೀರಿ. ಇದರ ಜೊತೆಗೆ ನಮ್ಮ ಸರ್ಕಾರದವರು ಎಷ್ಟು ಹಣ ಒದಗಿಸಿದರು?

ಮಾನ್ಯ ಶ್ರೀ ಟಿ. ವರಿಯಪ್ಪನವರು.—ಅದನ್ನು ಬಡ್ಜೆಟ್ಟಿನಲ್ಲೇ ತೋರಿಸಿದ್ದೇವೆ. ಹೆಚ್ಚು ಕಡಿಮೆ ಅವರು ಕೊಟ್ಟಿರುವುದಕ್ಕೆ ಸರಿಸಮನಾಗಿ ನಾವೂ ಖರ್ಚು ಮಾಡಿದ್ದೇವೆ. ಕೆಲವು ಸಂದರ್ಭಗಳಲ್ಲಿ ಸ್ವಲ್ಪ ಜಾಸ್ತಿ ಕೂಡ ಮಾಡಿದ್ದೇವೆ.

ಶ್ರೀ ಎಸ್. ಕರಿಯಪ್ಪನವರು.—ಇಂಡಿಯಾ ಸರ್ಕಾರದವರು ಕೆಲವು ದೊಡ್ಡ ಯೋಜನೆಗಳ ವಿಷಯದಲ್ಲಿ ತಾವೇ ಪೂರ್ತಾ ಮೊಬಲಗನ್ನೂ ಹಾಕಿ ಕೆಲವು ಕಡೆ ಕೈಕೊಂಡಿರುವಂತೆ ನಮ್ಮ ದೇಶದಲ್ಲಿ ಯಾವುದೂ ಅಂಥಾ ಯೋಜನೆಯಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಾಧಾರಣವಾಗಿ ಕೇಂದ್ರ ಸರ್ಕಾರದವರು ಹಾಗೆ ಯಾವುದನ್ನೂ ತಾವೇ ಪೂರ್ತಿ ಹಣ ಕೊಟ್ಟು ಕೈಕೊಳ್ಳುವುದಿಲ್ಲ. ಎಲ್ಲಿದ್ದರೂ, ಒಳ್ಳೆಯ ನೀರಿನ ಕೊರತೆಯಿದ್ದು ಪ್ರಾಂತಿಕ ಸರ್ಕಾರದವರು ಹಣ ಒದಗಿಸಿ ಅದನ್ನು ಕೈಕೊಳ್ಳುವುದರಿಂದ ಅಷ್ಟು ಲಾಭದಾಯಕವಾಗಿಲ್ಲದೆ ಕೈಬಿಟ್ಟಿದ್ದರೆ, ಅಂಥ ಕೆಲಸಗಳನ್ನು ತಾವೇ ಕಾಂಟ್ರಿಬ್ಯೂಷನ್ ಕೊಟ್ಟು ಮಾಡಿಸುತ್ತಾರೆ. ಖರ್ಚಿನಲ್ಲಿ ಅರ್ಧ ವಹಿಸಿಕೊಳ್ಳಬೇಕು.

ಶ್ರೀ ಎಸ್. ಕರಿಯಪ್ಪನವರು.—ದಾಮೋದರ್ ಕಣಿವೆ ಪ್ರಾಜೆಕ್ಟ್ ಇಂಡಿಯಾ ಸರ್ಕಾರದವರೇ ಪೂರ್ತಾ ಮೊಬಲಗು ಕೊಟ್ಟು ಮಾಡಿದ್ದಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಕೇಂದ್ರದ ನೀರಾವರೀ ಕಾರ್ಯಕ್ರಮಗಳೊಳಗೆ ಸೇರಿದ್ದಾಗಿದೆ. ಅಂಥಾ ಯಾವ ಪ್ರಾಜೆಕ್ಟೂ ಮೈಸೂರು ದೇಶದಲ್ಲಿಲ್ಲ.

ಶ್ರೀ ಎಸ್. ಕರಿಯಪ್ಪನವರು.—ಹಾಗಾದರೆ ನಮ್ಮ ಸರ್ಕಾರದವರು ಯಾವುದನ್ನೂ ಕೇಂದ್ರದವರು ತೆಗೆದು ಕೊಳ್ಳಬೇಕೆಂದು ಕೇಳಲಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಂಥಾ ಭಾರಿ ಯೋಜನೆಯು ನಮ್ಮಲ್ಲಿ ಲ್ಲ. ಆದರೂ ನಮ್ಮ ಲಕ್ಷವಳ್ಳಿಯನ್ನು ಏಕೆ ಅವರು ತೆಗೆದುಕೊಳ್ಳಕೂಡದೆಂದು ಕೇಳಿದ್ದೇವೆ. ಅದಕ್ಕೂ ಅವರು ಸಾಲವನ್ನು ಬೇಕಾದಷ್ಟು ಕೊಡುತ್ತೇವೆಂದು ಹೇಳಿದರೇ ಹೊರತು ಪೂರ್ತಿ ತಾವೇ ತೆಗೆದುಕೊಳ್ಳುವುದಕ್ಕೊಪ್ಪಲಿಲ್ಲ.

ಶ್ರೀ ಎಸ್. ಕರಿಯಪ್ಪನವರು.—ಈ ಕೆಲಸಗಳಿಗಾಗಿ ಚಾಲ್ತಿಸಾಲಿನಲ್ಲಿ ಎಷ್ಟು ಹಣ ಒದಗಿಸಿದ್ದೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಡ್ಜೆಟ್ಟಿನಲ್ಲಿ ಅದನ್ನು ನಮೂದಿಸಿದೆ. ಅಷ್ಟೂ ಖರ್ಚಾಗಿ ಇನ್ನೂ ಜಾಸ್ತಿ ಬೇಕೆಂದರೆ ಅದನ್ನೂ ಕೊಡುವುದಕ್ಕೆ ಸರ್ಕಾರದವರು ಸಿದ್ಧರಾಗಿದ್ದಾರೆ.

Sri Kadidal MANJAPPA (Shimoga District—General).—May I know what are the three major irrigation schemes undertaken in Shimoga District under the Grow More Food scheme?

The Hon'ble Sri T. MARIAPPA.—There are a large number of irrigation

(THE HON'BLE SRI T. MARIAPPA.)

works started in Shimoga District. I have given a detailed answer for a different question altogether.

Sri Kadidal MANJAPPA.—I am referring to the major irrigation works started in connection with the Grow More Food Scheme. I am referring to page 20 of Questions and Answers, Set No. II.

The Hon'ble Sri T. MARIAPPA.—On page 20 I have given a list.

Sri Kadidal MANJAPPA.—What are the three major irrigation schemes?

The Hon'ble Sri T. MARIAPPA.—Is the Hon'ble Member referring to Thunga? Thunga is not included in the Growmore Food Scheme.

Sri Kadidal MANJAPPA.—I want the names of the three major schemes.

The Hon'ble Sri T. MARIAPPA.—In Shimoga District there is the Sulekere scheme. I want notice to give the details.

Sri H. SIDDAVEERAPPA.—(Chitaldrug District—General).—Under the Grow More Food scheme, in respect of different works like major irrigation works, etc., have the Government got any plan and any period fixed?

The Hon'ble Sri T. MARIAPPA.—Yes, 49-50, 50-51 and 51-52; for these three years. For 49-50 and 50-51 schemes have been approved by the Government of India and grants have been given.

Sri H. SIDDAVEERAPPA.—If one scans through this Appendix, one will see that this amount has not been evenly distributed in all the divisions. Does it mean to say that there is need for these works in particular divisions only?

The Hon'ble Sri T. MARIAPPA.—In the case of short-term irrigation projects, we cannot evenly distribute the entire amount. It depends upon the availability of the site for the construction of a project, availability of water supply, rainfall and other favourable conditions.

Sri H. SIDDAVEERAPPA.—May I know, under item No. 2 'Land Improvement Schemes', what exactly the schemes are?

The Hon'ble Sri T. MARIAPPA.—The land improvement schemes are, draining away marshy areas, putting up pick-ups to lift water that is going to waste; if it has become water-logged and saline, to reclaim it. All these things.

Sri H. SIDDAVEERAPPA.—Under the 'Grow More Food' Scheme, are the Government concentrating only on lift irrigation works?

The Hon'ble Sri T. MARIAPPA.—The Government are concentrating on short-term irrigation projects.

Sri H. SIDDAVEERAPPA.—Is the distribution of the grants by the Central Government made according to the needs of any particular State?

The Hon'ble Sri T. MARIAPPA.—No. It is on a planned basis. They examine the suitability of the scheme at first, whether it is worthwhile to take up a scheme and whether it can be completed in three years and what would be the cost of the scheme. All these factors will be taken into consideration before approval is given.

Sri H. SIDDAVEERAPPA.—Are the Government of India prepared to give the requisite grant in order to make us self-sufficient with regard to food and with a view to implement the land improvement schemes successfully?

The Hon'ble Sri T. MARIAPPA.—Yes. In fact, the Government of India have promised to give all the money that is needed provided our schemes are sound and bear close scrutiny.

Sri H. SIDDAVEERAPPA.—Is there any condition that we must also contribute an equal amount?

The Hon'ble Sri T. MARIAPPA.—Yes. The State also must find an equal amount of money and in some cases, a little more.

ಶ್ರೀ ಎ. ಎಸ್. ನಾರಾಯಣರಾಯರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಕೇಂದ್ರದವರು ಕಳೆದ ವರ್ಷ ಹೆಚ್ಚು ಆಹಾರ ಬೆಳೆಯಬೇಕೆಂಬ ಯೋಜನೆಯ ಸಂಬಂಧವಾಗಿ 42,63,923 ರೂಪಾಯಿಗಳ ಗ್ರಾಂಟನ್ನು ಮಂಜೂರು ಮಾಡಿದ್ದು ಈ ವರ್ಷ ಅದೇ ಬಾಬಿಗೆ 33 55,238 ರೂಪಾಯಿಗಳನ್ನು ಮಾತ್ರ ಮಂಜೂರು ಮಾಡಿದ್ದಾರೆ. ಈ ವ್ಯತ್ಯಾಸಕ್ಕೆ ಕಾರಣ ವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗ ನಮ್ಮ ಯೋಜನೆಗಳೆಲ್ಲಾ ಪೂರ್ತಿಯಾಗಿರಲಿಲ್ಲ. ಒಂದು ಭಾಗ ಮಾತ್ರ ಪೂರ್ಣವಾಗಿದ್ದ ಪ್ರಯುಕ್ತ ಅಷ್ಟನ್ನು ಕೊಟ್ಟಿದ್ದಾರೆ. ಆದರೆ ಹೋದ ವರ್ಷ ಕೇಂದ್ರ ಸರ್ಕಾರದವರು ಈ ಬಾಬಿಗೋಸ್ಕರವಾಗಿ ನಮಗೆ 42 ಲಕ್ಷ

ಚಿಲ್ಲರೆ ರೂಪಾಯಿಗಳ ಗ್ರಾಂಟನ್ನು ಮತ್ತು 29·5 ಲಕ್ಷ ರೂಪಾಯಿಗಳನ್ನು ಸಾಲದ ರೂಪವಾಗಿಯೂ ಕೊಟ್ಟಿದ್ದು, ಈ ವರ್ಷ ಇದಕ್ಕೆ 33 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಗ್ರಾಂಟ್ ರೂಪವಾಗಿಯೂ ಮತ್ತು ಸುಮಾರು 40 ಲಕ್ಷ ರೂಪಾಯಿಗಳನ್ನು ಸಾಲದ ರೂಪವಾಗಿಯೂ ಕೊಡಲೊಪ್ಪಿದ್ದಾರೆ. ಅದುದರಿಂದ ಎರಡೂ ಸ್ವಲ್ಪ ಹೆಚ್ಚು ಕಡಿಮೆ ಒಂದೇ ಆಯಿತು.

ಶ್ರೀ ವಿ. ಎಸ್ ನಾರಾಯಣರಾಯರು.—ಇದನ್ನು ಕೇಳುವಾಗಲೇ ನೀವು ಕಮ್ಮಿ ಕೇಳಿದಿರೋ ಅಥವಾ ಅವರು ಕೊಡುವಾಗ ನೀವು ಕೇಳಿದ್ದಕ್ಕಿಂತ ಕಮ್ಮಿ ಕೊಟ್ಟರೋ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವು ಕೇಳಿದ್ದಕ್ಕಿಂತಲೂ ಕೆಲವು ವೇಳೆ ಹೆಚ್ಚಾಗಿಯೇ ಇದೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಡಿಸ್ಟ್ರಿ.).—ಸ್ವಾಮಿ, ಈ ಅಣೆಕಟ್ಟುಗಳ ಬಗ್ಗೆ ಒಟ್ಟು ಖರ್ಚು ಎಷ್ಟಾಗುತ್ತದೆಂಬುದನ್ನು ತಿಳಿಸುವಿರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1949-50 ನೆಯ ಸಾಲಿಗೆ ಆಗಿರತಕ್ಕ ವೆಚ್ಚದ ಬಗ್ಗೆ ಮಾನ್ಯ ಸದಸ್ಯರಿಗೆ ಈಗಾಗಲೇ ಒಂದು ಪಟ್ಟಿಯನ್ನು ಓದಗಿಸಲಾಗಿದೆ. ಅಂದರೆ 1-1-1949 ರಿಂದ 30-6-1950ರವರೆಗೆ ಒಂದು ಕೋಟಿ 70 ಲಕ್ಷ ಚಿಲ್ಲರೆಯನ್ನು ಈ ಬಾಬಿಗಾಗಿ ಓದಗಿಸಲಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಸಣ್ಣ ಕೆರೆಗಳ ಜೀರ್ಣೋದ್ಧಾರದ ಬಗ್ಗೆ ಈಗಾಗಲೆ 690 ಕೆರೆಗಳನ್ನು ಜೀರ್ಣೋದ್ಧಾರ ಮಾಡಲಾಯಿತೆಂದು ತಿಳಿಸಲಾಗಿದೆ. ಹಾಗೆ ದುರಸ್ತಿ ಮಾಡಲಾದ ಕೆರೆಗಳ ಕೆಳಗೆ ವ್ಯವಸಾಯಕ್ಕೆ ಅನುಕೂಲವಿದ್ದು ಈಗ ಸಾಗುವಳಿಯಾಗುತ್ತಿರುವ ಭೂಮಿಯು ಎಷ್ಟಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ರಂಗರಾಮಯ್ಯನವರು.—ಹೀಗೆ ದುರಸ್ತು ಮಾಡಿದಂಥ ಎಷ್ಟು ಕೆರೆಗಳ ಕೆಳಗೆ ಈಗ ತರಿ ವ್ಯವಸಾಯ ನಡೆಯುತ್ತಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಜೀರ್ಣೋದ್ಧಾರವಾಗಿರತಕ್ಕಂಥಾ ಎಲ್ಲಾ ಕೆರೆಗಳ ಕೆಳಗೂ ತರಿ ವ್ಯವಸಾಯ ನಡೆಯುತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈ 690 ಕೆರೆಗಳ ಕೆಳಗೆ ಇರುವಂಥ ಎಲ್ಲಾ ಜಮೀನಿಗೂ ಈಗ ನೀರು ನರಬರಾಯಿಯಾಗಿ ಅಲ್ಲಿ ತರೀ ವ್ಯವಸಾಯ ನಡೆಯುವಂತೆ ಮಾಡಲಾಗಿದೆಯೇ? ಅಥವಾ ಒಂದೊಂದು ಕೆರೆಯ ಕೆಳಗೆ ಎಷ್ಟೆಷ್ಟು ಎಕರೆ ತರೀ ಸಾಗುವಳಿ ನಡೆಯುತ್ತಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಕೆರೆಗಳೆಲ್ಲಾ ಇನ್ನೂ ಸಂಪೂರ್ಣವಾಗಿ ರಿಪೇರಿಯಾಗಿಲ್ಲ. ಅಂದರೆ ಈಗ ಸರ್ವೇಸಾಧಾರಣವಾಗಿ ಪ್ರತಿಯೊಂದು ಕೆರೆಯ ಕೆಳಗೂ 8—10 ಎಕರೆ ತರೀ ಸಾಗುವಳಿಯಾಗುತ್ತದೆಯೆಂದು ಅಂದಾಜು ಮಾಡಬಹುದು.

ಶ್ರೀ ಎಸ್. ರಂಗರಾಮಯ್ಯನವರು.—ಈ ಅಣೆಕಟ್ಟು ಫಾನರ್ ಇತ್ಯಾದಿಗಳಿಂದೆಲ್ಲ ಈಗ ಎಷ್ಟು ಎಕರೆಗೆ ನೀರನ್ನೊದಗಿಸಲು ಗ್ಯಾರಂಟಿ ಕೊಡಬಹುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್. ಅಂದರೆ ಈಗ ಟೈರ್‌ಎಂಡಿನಲ್ಲಿರುವ ಜಮೀನುಗಳೆಲ್ಲಾ ನೀರು ನರಬರಾಯಿ ಆಗುತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಮೈಸೂರಿನಲ್ಲಿ ಈಗ ರಿಪೇರಿಯಾಗಬೇಕಾದ್ದು 100 ಕೆರೆಗಳೆಂದು ಹೇಳಿದ್ದೀರಿ. ಆ ಪೈಕಿ ಈಗ ಎಷ್ಟು ರಿಪೇರಿ ಆಗಿವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1949-50ಕ್ಕೆ 100 ಕೆರೆಗಳನ್ನು ದುರಸ್ತು ಮಾಡಬೇಕೆಂದು ಪಟ್ಟಿಯಲ್ಲಿ ಸೇರಿಸಲಾಯಿತು. ಆದರೆ ನಂಸ್ಥಾನಾಮಳೆ 150 ಕೆರೆಗಳು ದುರಸ್ತಿಯಾಗಿವೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಲಿಫ್ಟ್ ಇರಿಗೇಷನ್ ಬಗ್ಗೆ ತಾವು ಈಗ ತಿಳಿಸಿರುವುದು ಚಿತ್ರದುರ್ಗ ಮತ್ತು ಮಳವಳ್ಳಿ ಎಂದು ಕೇವಲ ಎರಡನ್ನು ಮಾತ್ರ ತಿಳಿಸಿದ್ದೀರಿ. ಆದರೆ ಟಿ. ನರಸೀಪುರವನ್ನು ಏತಕ್ಕೆ ಸೇರಿಸಲಿಲ್ಲ!

ಮಾನ್ಯ ಶ್ರೀ ಟಿ. ವರಿಯಪ್ಪನವರು.—ಪಿ. ಡಬ್ಲ್ಯು. ಡಿ. ರೆಕ್ಕದ ಪ್ರಕಾರ ಟಿ. ನರಸೀಪುರ, ಮಳವಳ್ಳಿ ಡಿವಿಜ್‌ನಿಗೆ ಸೇರಿರುತ್ತದೆ. ತಾವು ದಯೆಯಿಟ್ಟು ಪ್ರಶ್ನೋತ್ತರದ 20ನೇ ಪುಟವನ್ನು ನೋಡಿ.

ಶ್ರೀ ಎಸ್. ರಂಗರಾಮಯ್ಯನವರು.—ಈ ನಿಲು ಸೋಗೆ ಯಾವ ಡಿವಿಜ್‌ನಿಗೆ ಸೇರುತ್ತದೆ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೂ ಮಳವಳ್ಳಿಗೆ ಸೇರಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಎರಡು ಲಿಫ್ಟ್ ಇರಿಗೇಷನ್ನಿನಿಂದ ಒಟ್ಟು ಎಷ್ಟು ಎಕರೆ ಸಾಗುವಳಿಗೆ ಬಂದಿದೆ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—410 ಎಕರೆಗಳ ಅಂದಾಜನ್ನು ಮೊದಲು ಮಾಡಲಾಗಿತ್ತು. ಆದರೆ ಈಗ 180 ಎಕರೆ ಆ ಪೈಕಿ ಸಿದ್ಧವಾಗಿದೆಯೆಂದು ವರ್ತಮಾನ ಬಂದಿದೆ. ಇನ್ನು ಹರಿಹರದಲ್ಲಿ 260 ಎಕರೆಗಳ ಅಂದಾಜು ಮಾಡಿದ್ದರಲ್ಲಿ ಈಗ 40-50 ಎಕರೆ ಗಳನ್ನು ಸಿದ್ಧಗೊಳಿಸಲಾಗಿದೆಯೆಂದು ತಿಳಿದುಬಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಅಲ್ಲಿ ಈಗ ಎಕರೆಯೊಂದಕ್ಕೆ ಎಷ್ಟು ಸೆಸ್ ಹಾಕಿದ್ದಾರೆ!

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಯಾವ ಅಸೆಸ್‌ಮೆಂಟ್‌ನ್ನೂ ಹಾಕಿಲ್ಲ. ಸದ್ಯ ರೈತರು ಎರೆ ಕ್ವಿಕ್ ಪಂಪ್ ಛಾರ್ಜನ್ನು ಕೊಟ್ಟರೆ ನಾವು ಬಹಳ ಸಂತೋಷಪಡುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಈ ಯೋಜನೆಗಳ ಬಗ್ಗೆ ಒಟ್ಟೆಷ್ಟು ಖರ್ಚಾಯಿತು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಾ ಸೇರಿ ಸುಮಾರು 1 ಲಕ್ಷ 40 ಸಾವಿರ ರೂಪಾಯಿ ಆಗ ಬಹುದು.

ಮತ್ತೊಂದು ಲಿಫ್ಟ್ ಇರಿಗೇಷನ್ ಬಗ್ಗೆ ಮಿಲಿಟರಿಯವರೇ ಅಲ್ಲಿ ಬಹಳಷ್ಟನ್ನ ಕೆಲಸಗಳನ್ನು ಪೂರೈಸಿದ್ದುದರಿಂದ,—ಅಂದರೆ ಅವರೇ ಟ್ರಾಕ್ಟರು ಗಳನ್ನೆ ಹಾಕಿ ನೆಲವನ್ನು ಸಮನಾಗಿ ಮಾಡಿ, ಪೈಪು ಮೈರೆಗೆಳನ್ನೆಲ್ಲಾ ಹಾಕಿಟ್ಟಿದ್ದರು.—ಅದರಿಂದ ಅಲ್ಲಿ ಸುಮಾರು 8—10 ಸಾವಿರ ರೂಪಾಯಿ ಖರ್ಚಾಗಿರ ಬಹುದು.

ಶ್ರೀ ಎಸ್. ರಂಗರಾಮಯ್ಯನವರು.—480 ಎಕರೆ ಸಾಗುವಳಿಗೆ ತರಬೇಕೆಂದಿದ್ದುದರ ಪೈಕಿ ಕೇವಲ 180 ಎಕರೆಗಳಷ್ಟು ಮಾತ್ರ ಸಾಗುವಳಿಗೆ ಬಂದು ಉಳಿದಿರ ತಕ್ಕದ್ದು ಇಷ್ಟು ನಿಧಾನವಾಗಲು ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಾ ಜಮೀನಾನ್ನು ವ್ಯವಸಾಯಕ್ಕೆ ತರಲು ಬೇಕಾದ ಸೌಕರ್ಯಗಳನ್ನೆಲ್ಲಾ ನೀಡಲಾಗಿದೆ. ಟ್ರಾಕ್ಟರು ಗಳನ್ನು ಕೊಡರಾಗಿವೆ. ರೈತರಿಗೆ ಕೆಲಸವನ್ನು ಬೇಗ ಬೇಗ ಕೈಗೊಳ್ಳಬೇಕೆಂದು ಅವರಿಗೆ ನೋಟೀಸ್ ಕೊಡ ರಾಗಿದೆ. ಆದರೆ ಸ್ವಂತದ ಎದ್ದುಮಾನಗಳ ಕಷ್ಟದಿಂದ ಕೊಂಚ ನಿಧಾನವಾಗಿರಬಹುದು.

—ಶ್ರೀ ಎಸ್. ರಂಗರಾಮಯ್ಯನವರು.—ಈ 400 ಎಕರೆಗಳ-ಪೈಕಿ ಈಗ ಹಾಲಿ ನೀರು ಒದಗಿಸಿ ಸಾಗಿಗೆ ಬಂದಿರತಕ್ಕ ಜಮೀನುಗಳಿಗೆ ಮಾತ್ರ ಸೆನ್ಸುಹಾಕಿದ್ದೀರೊ ಅಥವಾ ಆ ಜಮೀನುಗಳ ಮೇರೆಲ್ಲಾ ತೆರಿಗೆ ವಿಧಿಸಿದ್ದೀರೊ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೀರು ತೆಗೆದು ಕೊಳ್ಳತಕ್ಕವರಿಗೆ ಮಾತ್ರ ಸೆನ್ಸನ್ನು ವಿಧಿಸರಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗೆ ಮಾಡುವುದರಿಂದ ಸರ್ಕಾರದವರಿಗೇನೂ ಲುಕ್ಸಾನಾಗುವುದಿಲ್ಲವೇ !

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಷ್ಟವಾಗುತ್ತದೆ. ಆದರೆ ಅಷ್ಟಕ್ಕೆಲ್ಲ ಅವಕಾಶ ಕೊಡದಂತೆ ನಿರ್ದಿಷ್ಟವಾದ ತಿಳಿವಳಿಕೆಯನ್ನೆ ಕೊಡಲಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಬಲಾತ್ಕಾರವಾಗಿ ವಸೂಲು ಮಾಡುವಂತೆ ತಿಳಿವಳಿಕೆ ಕೊಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Strict instructions ಮಾತ್ರ ಕೊಡರಾಗುತ್ತದೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—ಶಿವಮೊಗ್ಗ ಜಿಲ್ಲೆಯ ತುಂಗಾವೇಲಯಲ್ಲಿ ಲಫ್ಟ್ ಇರಿಗೇಷನ್‌ಗೆ ಅನುಕೂಲವಾಡಿಸಿಕೊಡಬೇಕೆಂದು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಸಮಿತಿಗಳಿಂದಲೂ ಮತ್ತು ಡೆಪ್ಯುಟಿ ಕಮಿಷನರ ಅಧ್ಯಕ್ಷತೆಯಲ್ಲಿ ನೇಮಕ ಮಾಡಿರತಕ್ಕಂಥ ಶಿವಮೊಗ್ಗ ಫುಡ್ ಪ್ರೊಡಕ್ಷನ್ ಸಮಿತಿಗಳು ಆ ಬಗ್ಗೆ ಮಾಡಿ ಕಳುಹಿಸಿರತಕ್ಕ ವಿಷಯಗಳು ಸರ್ಕಾರದವರ ಗಮನಕ್ಕೆ ಬಂದಿವೆಯೇ !

ಮಾನ್ಯ ಶ್ರೀ ಟಿ. ಮರಿಯಪ್ಪನವರು —ಬಂದಿವೆ.

ಶ್ರೀ ಎಲ್ ಸಿದ್ದಪ್ಪನವರು.—ಆ ಬಗ್ಗೆ ಏನು ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಹಾಗೆ ವಿಚಾರಣೆಯನ್ನು ಮಾಡುವ ಎಲ್ಲಾ ಯೋಜನೆಗಳೂ ಯಶಸ್ವಿಯಾಗಿ ನಡೆಯುತ್ತವೆಂದು ಹೇಳುವುದಕ್ಕಾಗುವುದಿಲ್ಲ. ಈ ಬಗ್ಗೆ ಎಲ್ಲಾ ಜನರ ನೆರವು, ಸಹಾಯ, ಪ್ರೋತ್ಸಾಹಗಳು ಅತ್ಯಗತ್ಯ ಹಾಗೆ ಜನರಿಂದ ದೊರೆಯಬಹುದಾದ ನೆರವು ಸಿಕ್ಕುತ್ತದೆಂದು ಭಾವಿಸಲು ಅವಕಾಶವಿರುವುದರಿಂದ ಹಂಗಾಮಿಯಾಗಿ ಅದನ್ನು ನಿಲ್ಲಿಸರಾಗಿತ್ತು. ಸರ್ ದಾತಾರ್‌ಸಿಂಗ್‌ರವರು ಬಂದು ಹೋದ ನಂತರ ಈ ವರ್ಷ ಪ್ರಯತ್ನ ಮಾಡಿನೋಡಿ ಎಂದು ತಿಳಿಸರಾಗಿದೆ.

ಶ್ರೀ ಎಲ್. ಸಿದ್ದಪ್ಪನವರು.—ಈ ಬಗ್ಗೆ ಕೇಂದ್ರ ಸರ್ಕಾರದ ರಾಷ್ಟ್ರೀಯ ನಿರ್ಬಂಧನೆಗಳ ಪ್ರಕಾರ ನಮ್ಮ ಸರ್ಕಾರವೂ ಆ ರೀತಿ ಎಲ್ಲೆಲ್ಲಿ ಅವಕಾಶವಿದೆಯೋ ಅಲ್ಲಿ ಈ ಯೋಜನೆಯನ್ನು ಕೈಗೊಳ್ಳುವಂತೆ ಮಾಡಲು ತಿಳಿವಳಿಕೆ ಕೊಡುತ್ತೀರಾ ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಈಗಾಗಲೆ ಹೊನ್ನಾಳಿಯ ತಾಲ್ಲೂಕಿನಲ್ಲಿ ಸ್ಯಾಂಕ್ಷನ್ ಮಾಡಿದ್ದೇವೆ. ಆದರೆ ಈ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ಜನರಲ್ಲಿ ಸಾಕಷ್ಟು ಪ್ರಚಾರ ಕಾರ್ಯ ಮಾಡಬೇಕು, ಅವರಿಗೆ ತಮ್ಮ ಸಹಾನುಭೂತಿ ಮತ್ತು ಸಹಾಯಗಳನ್ನೂ ನೀಡಬೇಕು. ಈ ಯೋಜನೆಯ ಸಂಬಂಧವಾಗಿ ಒಂದು ವರ್ಷಕ್ಕೆ 70–80 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಖರ್ಚು ಬರುತ್ತದೆ. ಆದರೆ ರೈತರಿಗೆಲ್ಲ ಬಾವಿಗಳ ನೀರನ್ನೆ ಪಂಪಿಂಗ್ ಮಾಡಲು ಕಡಿಮೆ ವೆಚ್ಚತಗಲುತ್ತದೆ. ಆದರೆ ಅವರೆಲ್ಲರೂ ಇದುವರೆಗೆ ಬತ್ತ, ಬೆಳೆಯಲು ಎಕರೆಗೆ 7—8—10 ರೂಪಾಯಿಗಳ ಖರ್ಚನ್ನು ಮಾಡಿದ್ದರೆ ಹೆಚ್ಚು. ಆದರೆ ಈಗ ಅವರು ಯಾವ ಸೆನ್ಸೂ ಕೊಡದೆ ಬರಿ ಬಾವಿಗಳ ನೀರನ್ನು ಪಂಪಿಂಗ್ ಮಾಡತಕ್ಕ ಬಗ್ಗೆ ಬರತಕ್ಕ ಖರ್ಚನ್ನು ಸರಾಸರಿ ಎಕರೆಗೆ 10 ರೂಪಾಯಿಗಳಂತೆ ಕೊಟ್ಟರೆ ಸಾಕಾಗಿರುತ್ತೆ.

ಶ್ರೀ ಎಲ್. ಸಿದ್ದಪ್ಪನವರು.—ಹಾಗಾದರೆ ಶ್ರೀ ಎಸ್. ಕರಿಯಪ್ಪನವರು ಹೇಳಿದ್ದು ಆ 450 ರೂಪಾಯಿಗಳ ಖರ್ಚು ಬರಿ ಪಂಪಿಂಗ್ ಥಾರ್ಜು ಮಾತ್ರವೇ !

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದರಲ್ಲ regular restoration of minor tanks ವಿಚಾರವನ್ನು ಹೇಳಿದೆ. ಈ ಪಂಪಿಂಗ್ ಥಾರ್ಜು ವಿಚಾರ ಇತ್ಯಾದಿಗಳನ್ನೆಲ್ಲಾ ಪ್ರಶ್ನೋತ್ತರಗಳ 3ನೆಯ ವಿಭಾಗದಲ್ಲಿ ತಿಳಿಸರಾಗಿದೆ.

ಶ್ರೀ ಎಲ್. ಸಿದ್ದಪ್ಪನವರು.—ಪ್ರಶ್ನೋತ್ತರಗಳ ಮೂರನೆಯ ಭಾಗದಲ್ಲಿ ತಾವು ಶ್ರೀ ಕರಿಯಪ್ಪನವರ ಪ್ರಶ್ನೆಗೆ ಕೊಟ್ಟಿರುವ ಉತ್ತರವು ಯಾವುದಕ್ಕೆ ಸಂಬಂಧಪಟ್ಟಿದೆ !

The Hon'ble Sri T. MARIAPPA.—This is independent of pumping apparatus. The initial outlay will be about Rs. 450 to Rs. 500 per acre. That we are prepared to bear. But the question is whether the people will be willing to bear the pumping charges because they are not accustomed to pay these heavy rates.

ಶ್ರೀ ಎಲ್. ಸಿದ್ದಪ್ಪನವರು.—ಯಾವುದಾದರೂ ಒಂದು ಪ್ರದೇಶದಲ್ಲಿ ಜನರು ಮುಂದೆ ಬಂದು ಪವರ್ ಕೇಳಿದರೆ ಕೊಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಗತ್ಯವಾಗಿ ಸಹಕಾರ ಸಂಘಗಳಲ್ಲಿ ಸದಸ್ಯನಾಗಿ 100—200 ಎಕರೆ ತೆಗೆದುಕೊಳ್ಳುತ್ತೇವೆ-ದು ಸಾಕಷ್ಟು ಸೆಕ್ಯೂರಿಟಿ ಕೊಟ್ಟರೆ ಅಗತ್ಯವಾಗಿ ಕೊಡುತ್ತೇವೆ.

ಶ್ರೀ ಎಲ್. ಸಿದ್ದಪ್ಪನವರು.—ಏನು ಸೆಕ್ಯೂರಿಟಿ ತಾವು ಕೇಳುವುದು ?

The Hon'ble Sri T. MARIAPPA.—Sufficient guarantee to pay off electric charges.

ಶ್ರೀ ಎಲ್. ಸಿದ್ದಪ್ಪನವರು.—ಅಪೆಂಡಿಕ್ಸ್‌ನಲ್ಲಿ "2. Land Improvement Schemes" ಗೆ 175 ಡಿಪಿರ್ಷ ಎಂದು ಹೇಳಿದ್ದೀರಿ. ಆದರೆ ರೈತರು ತಮ್ಮ ಸ್ವಂತ ಜಮೀನಿನಲ್ಲಿ ಮಾಡಿರುವ ಕೆಲಸವೆ ?

ಮಾನ್ಯ ಶ್ರೀ ಟಿ. ವರಿಯಪ್ಪನವರು.—ಹೆಚ್ಚು ಭಾಗ ರೈತರ ಹಿಡುವಳಿಯಲ್ಲದೆ. ಖಿಕವಾಗಿ ರೈತರ ಜಮೀನಿನಲ್ಲಿ ಅವಕಾಶ ಮಾಡಿರುವುದು ಸೇರಿದೆ.

ಶ್ರೀ ಎಲ್. ಸಿದ್ದಪ್ಪನವರು.—ಅದಕ್ಕೆ ತಗಲಿರುವ ಪೂರ್ತಿ ವೆಚ್ಚವನ್ನು ಸರ್ಕಾರದವರು ಭರಿಸುವರೆ ಅಥವಾ ರೈತರಿಂದ ಕಂಟ್ರಿಬ್ಯೂಷನ್ ಮೂಲಕ ವಸೂಲು ಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತರಿ ಕಂದಾಯ ಕೊಡುವ ಕಡೆ ನೀರಿಲ್ಲದೆ ವ್ಯವಸಾಯ ಮಾಡಲು ಸಾಧ್ಯವಿಲ್ಲದಿದ್ದರೆ ಅದಕ್ಕೆ ಕೇಂದ್ರದವರು ಸೇಕಡ 50 ಭಾಗ, ನಾವು ಸೇಕಡ 50 ಭಾಗ ಕೊಡುತ್ತಿದ್ದೇವೆ. ಅಲ್ಲಿ ಕಂಟ್ರಿಬ್ಯೂಷನ್ ಕೇಳುತ್ತಿಲ್ಲ.

ಶ್ರೀ ಎಲ್. ಸಿದ್ದಪ್ಪನವರು.—ಈ ರೀತಿಯಾಗಿ ಒದಗಿನಿರುವ ಅನುಕೂಲತೆಯು 3–4 ಜಿಲ್ಲೆಯವರಿಗೆ ಮಾತ್ರ ದೊರಕುತ್ತದೆ, ಬಾಕಿಯವರಿಗೆ ಸರಿಯಾಗಿ

ಪ್ರಚಾರವಾಗದೇ ಇರುವುದರಿಂದ ದೊರಕುತ್ತಿಲ್ಲ ಎಂಬುದನ್ನು ಒಪ್ಪುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಸಾಮಾನ್ಯವಾಗಿ ಶಿವಮೊಗ್ಗ, ಮಂಡ್ಯ ಮತ್ತು ಚಿತ್ರದುರ್ಗ ಈ ಮೂರು ಕಡೆ ಇದೆ. ಮುಖ್ಯವಾಗಿ ಸೂಳೆಕೆರೆ ಕಡೆ ಇದೆ. ಅದರ ಖರ್ಚಿನ್ನಾಗುತ್ತದೆಯೆಂಬುದನ್ನು ನೋಡುವುದಕ್ಕಾಗಿ ಇಂಡಿಯಾ ಸರ್ಕಾರದವರು ಈ ಮೂರು ಜಾಗಗಳಲ್ಲಿ ಕೆಲಸ ನಡೆಯಲು ಒಪ್ಪಿದ್ದಾರೆ.

ಶ್ರೀ ಎಲ್. ಸಿದ್ದಪ್ಪನವರು. ಶಿವಮೊಗ್ಗ, ಚಿತ್ರದುರ್ಗ ಬಿಟ್ಟುಕೊಟ್ಟಿವೆ. ಬಾಕಿ ಜಿಲ್ಲೆಗಳಲ್ಲಿ ಹೆಚ್ಚಾಗಿ ಮಾಡಿದೆ ಎಂಬುದನ್ನು ಒಪ್ಪುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ರ್ಯಾಂಡ್ ಇಂಪ್ರೂವ್‌ಮೆಂಟ್ ಸ್ಕೀಮಿನಲ್ಲಿ ಪಿಕಪ್ ಮಾಡಿರುವುದು ಕಡಿಮೆ ಇರುತ್ತದೆ.

The Hon'ble Sri T. MARIAPPA.— I think there is an omission to include Shimoga because under Sulekere, as you know, they have taken up land improvement schemes costing about a lakh of rupees.

Sri L. SIDDAPPA.—Will the Government pass on the details to me for perusal ?

The Hon'ble Sri T. MARIAPPA.— Yes.

ಶ್ರೀ ಎಲ್. ಸಿದ್ದಪ್ಪನವರು.—ಡೀ ಸಿಲ್ಟಿಂಗ್ ಕೆಲಸ ಎರಡು ಕಡೆ ಮಾತ್ರ ಇದೆ. ಬಾಕಿ ಕೆರೆಗಳು ಇರುವ ಕಡೆ ಏಕೆ ಆ ಕೆಲಸವನ್ನು ತೆಗೆದುಕೊಂಡಿಲ್ಲ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೋದ ವರ್ಷ ಈ ಯೋಜನೆಯನ್ನು ಇಂಡಿಯಾ ಸರ್ಕಾರದವರು ಅಂಗೀಕಾರ ಮಾಡುವುದು ನಿಧಾನವಾಯಿತು. ಆದ್ದರಿಂದ ಎರಡನ್ನು ಮಾತ್ರ ತೆಗೆದುಕೊಂಡಿತ್ತು. ಇಂಡಿಯ ಸರ್ಕಾರವು ಅಂಗೀಕಾರ ಮಾಡಿದ ಮೇರೆ ಈ ವರ್ಷ ಜಾಸ್ತಿ ಮಾಡಿದೆ. ಕೋಲಾರದಲ್ಲಿ ತೆಗೆದುಕೊಂಡಿದೆ. ಮೊನ್ನೆ ಪ್ರಾಯಶಃ ಹಾಸನಕ್ಕೆ ಬುರ್‌ಡೋಜರ್ ಕಳುಹಿಸಿದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ-ನಿಮ್ಮು ಪಂಗಡ).—ಸೂಳೆಕೆರೆಯನ್ನು ರಿಪೇರಿ ಮಾಡುತ್ತಿರುವುದು ಹೆಚ್ಚು ಆಹಾರ ಬೆಳೆಯುವ ಯೋಜನೆ ಮೇರೆಗೆ ತಾನೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಇಂಡಿಯಾ ಸರ್ಕಾರದ ಗ್ರಾಂಟಿನಿಂದ ತಾನೆ ಅದನ್ನು ಮಾಡುತ್ತಿರುವುದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವೂ, ಅವರೂ ಇಬ್ಬರೂ ಕೊಡುತ್ತೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿ ಪ್ರಾಜೆಕ್ಟ್‌ನಲ್ಲಿ ಹೇಗೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಂಡಿಯಾ ಸರ್ಕಾರದವರು ಅರ್ಧಭಾಗ ಮತ್ತು ನಾವು ಅರ್ಧ ಭಾಗ ಕೊಡುತ್ತೇವೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಇಂಡಿಯಾ ಸರ್ಕಾರದವರು ಹೆಚ್ಚು ಆಹಾರ ಬೆಳೆಯಲು 43 ಲಕ್ಷ ಕೊಡುತ್ತಿದ್ದಾರೆ. ಆದರೆ ಲಕ್ಕವಳ್ಳಿ ಪ್ರಾಜೆಕ್ಟು ಬಹು ದೊಡ್ಡದಾದ್ದರಿಂದ ಅದಕ್ಕೆ ಈಗ ಕೊಡುತ್ತಿರುವ ಹಣ ನ್ಯಾಯವಾಗಿದೆಯೆ ?

The Hon'ble Sri T. MARIAPPA.— We will spend as much money for Lakkavalli as has been budgetted for it.

Sri L. H. THIMMA BOYI.—Will the amount allotted for repairs to Sulekere be restored for the Lakkavalli project ?

The Hon'ble Sri T. MARIAPPA.— I can assure the Hon'ble Member that the amount meant for works relating to the Sulekere tank will be separately met.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—42½ ಲಕ್ಷ ರೂಪಾಯಿ ಖರ್ಚು ಮಾಡುತ್ತೇವೆಂದು ಹೇಳುತ್ತೀರಿ ಅಷ್ಟು ಖರ್ಚು ಮಾಡುವುದರಿಂದ ಎಷ್ಟು ಜಮೀನು ಹೊಸದಾಗಿ ಸಾಗುವಳಿಗೆ ಬಂದಿದೆ ?

ಅಧ್ಯಕ್ಷರು.—ಅದಕ್ಕೆ ಆಗಲೇ ಉತ್ತರ ಹೇಳಿದೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ನಮಗಾರು ಎಷ್ಟು ಎಕರೆ ಬಂದಿದೆಯೆಂದು ಅಂದಾಜು ಹೇಳಲು ಸಾಧ್ಯವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಕೊನೆಯಪಕ್ಷ ಎಷ್ಟು ಪಲ್ಲ ಆಹಾರ ಧಾನ್ಯ ಹೆಚ್ಚಿದೆಯೆಂಬುದನ್ನಾದರೂ ಹೇಳುತ್ತೀರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೋದವರ್ಷ 16 ಚಿಲ್ಲರೆ ಇತ್ತು. ಈ ವರ್ಷ 18 ಚಿಲ್ಲರೆ ಆಗಬಹುದು.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಇಷ್ಟು ಹಣ ಖರ್ಚು ಮಾಡಿರುವುದರಿಂದ ಬೆಳೆ ಹೆಚ್ಚಿದೆಯೋ ಅಥವಾ ಮಳೆ ಬಂದುದರಿಂದ ಹೆಚ್ಚಿದೆಯೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ಎರಡು ಕಾರಣಗಳ ಜೊತೆಗೆ ನಾಲೆಗಳಲ್ಲಿ ಹೂಳು ತೆಗೆದಿರುವುದು, ಅನುಕೂಲತೆಗಳನ್ನೊದಗಿಸಿರುವುದ, ಬೆಳೆಗೆ ತೊಂದರೆಯಾಗದಂತೆ ನಿಗಾ ಇಟ್ಟಿರುವುದು ಇವೆಲ್ಲಾ ಸೇರಿವೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಬರೀ 42 ಲಕ್ಷ ಚಿಲ್ಲರೆ ಖರ್ಚು ಮಾಡಿರುವುದರಿಂದಲೇ ಎಷ್ಟು ಬಂದಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಈಗ ಹೇಳುವುದಕ್ಕೆ ಸಾಧ್ಯವಿಲ್ಲ. ನೋಡಿ ಹೇಳಬೇಕು.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಪ್ರತಿ ಕೆರೆಯನ್ನೂ ಜೀರ್ಣೋದ್ಧಾರ ಮಾಡಿದರೆ 50 ಎಕರೆಯಾದರೂ ಜಾಸ್ತಿಯಾಗುವುದಿಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ರೈತರು ವ್ಯವಸಾಯ ಮಾಡಿದರೂ ಅದಕ್ಕೆ ತಕ್ಕಷ್ಟು ಗೊಬ್ಬರ, ಗೋದುವರ್ಗೈರೆಹಾಕದಿದ್ದರೆ ಏನಾಗುತ್ತದೆ ! ಚೆನ್ನಾಗಿ ಕಷ್ಟಪಟ್ಟು ಎಲ್ಲಾ ಸರಿಯಾಗಿ ನಡೆದರೆ ಅದು ವ್ಯವಸಾಯ. ಅದು ಮಹಾಕಷ್ಟ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಹಾಗಾದರೆ ಎಷ್ಟು ವರ್ಷ ಹೀಗೆ ಖರ್ಚು ಮಾಡಿದರೆ ಹೆಚ್ಚು ಆಹಾರ ಧಾನ್ಯ ಬೆಳೆಯಲು ಸಾಧ್ಯವಾಗುತ್ತದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಜನಸಂಖ್ಯೆ ಹೆಚ್ಚಾಗದಾರದು, ಅದರ ಜೊತೆಗೆ ಮೂರು ವರ್ಷ ಕಷ್ಟಪಟ್ಟರೆ ಸ್ವಪರಿಪೂರ್ಣತೆಯನ್ನು ಪಡೆಯುವುದಕ್ಕೆ ಸಾಧ್ಯ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಈಗ ಖರ್ಚಾಗುತ್ತಿರುವ ಹಣವನ್ನು ತನಿಖೆ ಮಾಡುವವರು ಯಾರು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಡಿಟರಿದ್ದಾರೆ, ಸೂಪರ್‌ವೈಸಿಂಗ್ ಸಿಬ್ಬಂದಿಯಿದೆ, ಇಂಡಿಯಾ ಸರ್ಕಾರವವರೂ ಆಗಾಗ್ಗೆ ನೋಡುತ್ತಾರೆ. Honorary Food Production Commissioner and Retired Director of Agriculture ಶ್ರೀ ರಾಮಮೂರ್ತಿಯವರು ಇವರೆಲ್ಲಾ ನೋಡುತ್ತಾರೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು.—ಖರ್ಚಾಗುವುದರಲ್ಲಿ ಅರ್ಧ ಕೂಡ ಸದುಪಯೋಗವಾಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದಿಲ್ಲ ಮತ್ತು ಒಪ್ಪುವುದೂ ಇಲ್ಲ.

Sri G. A. ACHARYA (Bangalore District -General). You know how much you spent, but you cannot tell us what extra return you got ?

The Hon'ble Sri T. MARIAPPA.—I can tell you what the extra production is.

Sri G. A. ACHARYA.—But when it was asked what the direct excess yield was, you refused to answer ?

The Hon'ble Sri T. MARIAPPA.—I did not refuse to answer. I wanted notice.

Sri G. A. ACHARYA.—When you know the expected yield after spending about Rs. 42 lakhs over it, why do you not give us details ?

The Hon'ble Sri T. MARIAPPA.—I wanted notice because that has already been published in a pamphlet.

Sri G. A. ACHARYA.—How should the public know how much was spent and how much return you got ? Are not the public entitled to know all these details from you ?

The Hon'ble Sri T. MARIAPPA.—It is found on page 3 of the Answers to Unstarred Questions, 1949-50. It includes figures about rice, ragi, etc.

Sri G. A. ACHARYA.—How are the public to know whether there is excess production on account of spending so much money in excess ? Are not the public entitled to know that ?

The Hon'ble Sri T. MARIAPPA.—It is given on page 3 of the Unstarred Questions. It includes all foodgrains. It is not possible to give correct information.

Sri G. A. ACHARYA.—Do the Government think that all the money that has been spent on the Grow More Food Campaign is rightly spent ?

The Hon'ble Sri T. MARIAPPA.—I am certain about it, that the money earmarked for the short term irrigation projects is usefully spent.

Sri G. A. ACHARYA.—And are the Government convinced that such schemes can be undertaken every year ?

The Hon'ble Sri T. MARIAPPA.—In fact the Government of India would not have given us the money but for the soun ness of the schemes.

Sri G. A. ACHARYA.—Are the Government impressed with the results obtained so far ?

The Hon'ble Sri T. MARIAPPA.—Certainly. The Hon'ble Member can go and verify from those people who have been benefited.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ಮ ಪಂಗಡ.—ಎದು ಜ್ಯಕ್ತಿಯಿಂದ ನೀರನ್ನೆತ್ತಿ ನೀರಾವರಿಗೆ ಉಪಯೋಗಿಸುವ ಸ್ಥಳಗಳಲ್ಲಿರುವ ಸಿಬ್ಬಂದಿಗೆ ಎಷ್ಟು ಖರ್ಚಾಗುತ್ತದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟಿಸ್.

ಶ್ರೀ ಎಂ. ಮಾದಯ್ಯನವರು.—ಪವರ್ ಚಾರ್ಜು ಎಷ್ಟಾಗುತ್ತದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೂ ನೋಟೀಸ್ ಬೇಕು.

Mr. SPEAKER.—Question-time is over.

UNSTARRED QUESTIONS.

(to which answers were laid on the table).

Cottage Industries and Depressed Classes.

Sri GOVINDA DASS (Hassan District-Depressed Class).—

*Q.—100. Will the Government be pleased to state :—

(*a*) the amount spent for the cottage industries in the State during 1940-50 ;

(*b*) the number and names of such industries started or aided by the Government ;

(*c*) the amount spent for the Depressed Classes from 1940 to 1950 in respect of cottage industries (yearwar information to be furnished) ?